## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ ರವರ ನ್ಯಾಯಾಲಯ, ನರಸಿಂಹರಾಜಪುರ

**ಸಿ. ಸಿ. ನಂ. 492/2021**

**ಫಿರ್ಯಾದುದಾರರು:** ಸರ್ಕಾರದ ಪರವಾಗಿ ಬಾಳೆಹೊನ್ನೂರು ಪೊಲೀಸರು

-ವಿರುದ್ಧ-

**ಆರೋಪಿತರು:** 1) ಮಹೇಶ ಪಿ ಯಾನೆ ಅಭಿ ಯಾನೆ ಅಭಿಷ್ಠಾ,
ಬಿನ್. ವೆಂಕಟೇಶ ಪೂಜಾರಿ, 21 ವರ್ಷ, ಕೂಲಿ ಕೆಲಸ,
ವಾಸ: ಪಾದಿ ಹೋಣೆ, ಗಬ್ಗಲ್ ಗ್ರಾಮ,
ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

2) ಕೆ.ಎಂ. ಸಿದ್ದಿಕ್ ಯಾನೆ ಸಿದ್ದಿ, ವಾಸ: ಕಡ್ಲೆಮಕ್ಕಿ,
ಬಾಳೆಹೊನ್ನೂರು, ನ.ರಾ. ಪುರ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

- - -

### ದೋಷಾರೋಪಣೆ

ಜೀತು ಆರ್.ಎಸ್., ಬಿ.ಎ.ಎಲ್, ಎಲ್.ಎಲ್.ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ನ.ರಾ.ಪುರ ಆದ ನಾನು ಮೇಲ್ಕಂಡ;

ಆ.2 - ಕೆ.ಎಂ. ಸಿದ್ದಿಕ್ ಯಾನೆ ಸಿದ್ದಿ

ಆದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

ದಿನಾಂಕ 11.9.2020 ರಂದು ಸಂಜೆ 7.15 ಗಂಟೆ ಸಮಯದಲ್ಲಿ ಬಾಳೆಹೊನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯ ಬನ್ನೂರು ಬಸ್ ನಿಲ್ದಾಣದ ಹತ್ತಿರ ಈ ಪ್ರಕರಣದ 1 ನೇ ಆರೋಪಿ ಮಹೇಶ ಪಿ ಯಾನೆ ಅಭಿ ಯಾನೆ ಅಭಿಷ್ಠಾ ರವರು ಒಂದು ಪ್ಲಾಸ್ಟಿಕ್ ಕವರಿನೊಳಗೆ ಸುತ್ತಿದ್ದ ಪೇಪರ್ ಗಳಲ್ಲಿ ಒಟ್ಟು 50 ಗ್ರಾಂ ತೂಕವುಳ್ಳ ಕಾಂಡ, ಬೀಜ ಎಲೆ ಇರುವ ಗಾಂಜಾ ಸೊಪ್ಪನ್ನು ಸಾಗಾಣಿಕೆ ಮಾಡುತ್ತಿದ್ದು, ಈ ಬಗ್ಗೆ 1 ನೇ ಆರೋಪಿಯನ್ನು ವಿಚಾರಿಸಿದಾಗ ಸುಮಾರು ಒಂದು ವಾರದ ಹಿಂದೆ 2000/- ರೂ.ಗಳಿಗೆ 2 ನೇ ಆರೋಪಿಯಾದ ನಿಮ್ಮಿಂದ ಖರೀದಿ ಮಾಡಿಕೊಂಡು ಬಂದಿರುವುದಾಗಿ ತಿಳಿಸಿದ್ದು, ಕಾರಣ ನೀವು 2 ನೇ ಆರೋಪಿ ಎನ್.ಡಿ.ಪಿ.ಎಸ್. ಕಾಯಿದೆ ಕಲಂ 20(ಬಿ)(ii)(ಎ) ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

Siddiq

ಪ್ರ1: ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ?

ಉತ್ತರ 2:

ಅರ್ಥವಾಯಿತು.

ಪ್ರ2: ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರ 2:

ವಿಚಾರಣೆಯಾಗಬೇಕು.

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯವಾಗಿಯೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ : 15 ನೇ ದಿವಸ, ಜುಲೈ ಮಾಹೆ, 2025.

Siddig

15/7/25

(ಜೀತು ಆರ್.ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ನ.ರಾ.ಪುರ.